ವಿತ್ತ ಸಂಚಿಕೆ
SEPTEMBER 2024

# INSPIRE INDIA



ಶರಣ್ ಪಾಟೀಲ್
ಆರ್ಥಿಕ ತಜ್ಞರು

## ಸಲಹೆ ನಮ್ಮದು ಹೂಡಿಕೆ ನಿಮ್ಮದು

INSPIRE INDIA WEALTH PRIVATE LTD. @ 65, 'Surasa Enclave' 1st floor, Puttanna Road, Gandhi Bazar Basvanagudi, Bengaluru 560004, Ph: +91 8042129917, 9035414414. Mail: info@inspireindiafs.com Website: www.inspireindiafs.com



ಬಡವ-ಬಲ್ಲಿದನ ನಡುವಿನ ಏಕೈಕ ವ್ಯತ್ಯಾಸ ಎಂದರೆ ಸಮಯವನ್ನು ಅವರು ಹೇಗೆ ಬಳಸುತ್ತಾರೆ ಎಂಬುದು.
-ರಾಬರ್ಟ್ ಕಿಯೋಸ್ಕಿ



ಚಾಣಾಕ್ಷ ಹೂಡಿಕೆದಾರ ಆಶಾವಾದಿಗೆ ಮಾರಾಟ ಮಾಡುತ್ತಾನೆ ಮತ್ತು ನಿರಾಶಾವಾದಿಯಿಂದ ಖರೀದಿಸುತ್ತಾನೆ.
-ಬೆಂಜಮಿನ್ ಗ್ರಹಾಂ



ಹಣದ ದೊಡ್ಡ ಥೈಲಿ ಇರುವುದು ಖರೀದಿ ಅಥವಾ ಮಾರಾಟದಲ್ಲಿ ಅಲ್ಲ. ಕಾಯುವ ಸಹನೆಯಲ್ಲಿರುತ್ತದೆ.
-ಚಾರ್ಲಿ ಮುಂಗರ್




**ಕೇಂದ್ರ** ಸರ್ಕಾರ ಬಜೆಟ್ ಮಂಡಿಸುತ್ತದೆ ಎಂದರೆ ಉದ್ಯಮದ ಮಂದಿ ಮತ್ತು ಸಾರ್ವಜನ-ರಿಗೆ ಅದು ಕುತೂಹಲದ ದಿನ. ಸರ್ಕಾರ ಯಾವೆಲ್ಲ ಯೋಜನೆಗಳನ್ನು ಆರಂಭಿಸಿವೆ ಮತ್ತು ಯಾವೆಲ್ಲ ಉಪಕ್ರಮಗಳನ್ನು ಕೈಗೊಂಡಿವೆ ಹಾಗೂ ಅವುಗಳಿಂದ ನಮಗೆಷ್ಟು ಲಾಭವಾಗುತ್ತಿವೆ ಎಂಬ ನಿರೀಕ್ಷೆ.ಭಾರತದ ಆರ್ಥಿಕ ಕ್ಷೇತ್ರಕ್ಕೆ ಇದೊಂದು ಪ್ರಮುಖ ಕಾಲಘಟ್ಟ.

ಅದೇ ರೀತಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಈ ಸಾಲಿನ ಬಜೆಟ್‌ನ್ನು ಜುಲೈ 23ರಂದು ಮಂಡಿಸಿದರು.ಈ ಬಾರಿಯ ಬಜೆಟ್‌ನಲ್ಲಿ ಉದ್ಯೋಗ, ಕೌಶಲ್ಯಾಭಿವೃದ್ಧಿ, ಎಂ-ಎಸ್ಎಂಇ ಮತ್ತು ಮಧ್ಯಮವರ್ಗಕ್ಕೆ ಹೆಚ್ಚಿನ ಆದ್ಯತೆ ಮುಂತಾದ ಸಂಗತಿಗಳು ಈ ಬಜೆಟ್‌ನ ಪ್ರಮುಖಾಂಶಗಳು.

ಲೋಕಸಭಾ ಚುನಾವಣೆಗೂ ಮುನ್ನ ಮಂಡಿಸಲಾದ ಮಧ್ಯಂತರ ಬಜೆಟ್‌ಗೆ ಶಕ್ತಿ ತುಂಬುವ ರೀತಿಯಲ್ಲಿ ಈ ಬಜೆಟ್ ಇದೆ ಎನ್ನುವುದು ದಿಟ. 'ವಿಕಸಿತ ಭಾರತ'ಕ್ಕೆ ಕೊಡುಗೆ ನೀಡುವುದಕ್ಕೆ ಹೆಚ್ಚು ಗಮನ ನೀಡಲಾಗಿರುವ ಬಜೆಟ್‌ನಲ್ಲಿ ಒಂಭತ್ತು ಪ್ರಾಶಸ್ತ್ಯ ಕ್ಷೇತ್ರಗಳ ವಿವರ ಇಲ್ಲಿದೆ ಪ್ರಗತಿಗೆ ಇನ್ನಷ್ಟು ವೇಗ ನೀಡುವುದು ಇದರ ಉದ್ದೇಶ.

1. ಕೃಷಿಯಲ್ಲಿ ಉತ್ಪಾದಕತೆ ಮತ್ತು ಚೇತರಿಕೆ
2. ಉದ್ಯೋಗ ಮತ್ತು ಕೌಶಲ್ಯ
3. ಎಲ್ಲರನ್ನು ಒಳಗೊಳ್ಳುವ ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯ.
4. ತಯಾರಿಕೆ ಮತ್ತು ಸೇವೆಗಳು
5. ನಗರಾಭಿವೃದ್ಧಿ
6. ಇಂಧನ ಭದ್ರತೆ
7. ಮೂಲಸೌಕರ್ಯ
8. ಹೊಸ ಆವಿಷ್ಕಾರ, ಸಂಶೋಧನೆ & ಅಭಿವೃದ್ಧಿ
9. ಮುಂದಿನ ತಲೆಮಾರಿನ ಸುಧಾರಣೆಗಳ ಜಾರಿ

ಒಟ್ಟಾರೆ ತೆರಿಗೆ ಸ್ವರೂಪವನ್ನು ಸರಳಗೊಳಿಸುವ ಉದ್ದೇಶದೊಂದಿಗೆ ಹಣಕಾಸು ಸಚಿವರು ತೆರಿಗೆ ನಿಯಮದಲ್ಲಿ ಹಲವಾರು ಬದಲಾವಣೆಗಳನ್ನು ಮಾಡಿದ್ದಾರೆ. ಹೊಸ ತೆರಿಗೆ ಪದ್ಧತಿಯಲ್ಲಿ ಆದಾಯ ತೆರಿಗೆ ಸ್ವರೂಪವನ್ನು ಪರಿಷ್ಕರಿಸಲಾಗಿದೆ

ಪರಿಷ್ಕೃತ ತೆರಿಗೆ ಸ್ವರೂಪದ ಪ್ರಕಾರ ಹೊಸ ತೆರಿಗೆ ಪದ್ಧತಿಯನ್ನು ಆಯ್ಕೆ ಮಾಡಿಕೊಂಡವರು 17,500 ರೂ.ತನಕ ಉಳಿತಾಯ ಮಾಡಬಹುದು. ಹೊಸ ತೆರಿಗೆ ಪದ್ಧತಿ ಪ್ರಕಾರ ಪರಿಷ್ಕೃತ ತೆರಿಗೆ ಸ್ಲ್ಯಾಬ್‌ಗಳನ್ನು ಪರಿಶೀಲಿಸೋಣ:

| ಆದಾಯದ ಸ್ಲ್ಯಾಬ್ ಹ.ವ. 2023–24 | ತೆರಿಗೆ ದರಗಳು | ಆದಾಯದ ಸ್ಲ್ಯಾಬ್ ಹ.ವ. 2024–25 | ತೆರಿಗೆ ದರಗಳು |
|---|---|---|---|
| 0 - 3 ಲಕ್ಷ | Nil | 0 - 3 ಲಕ್ಷ | Nil |
| 3 - 6 ಲಕ್ಷ | 5% | 3 - 7ಲಕ್ಷ | 5% |
| 6 - 9 ಲಕ್ಷ | 10% | 7 - 10 ಲಕ್ಷ | 10% |
| 9 - 12 lakhs | 15% | 10 - 12 ಲಕ್ಷ | 15% |
| 12 - 15 ಲಕ್ಷ | 20% | 12 - 15 ಲಕ್ಷ | 20% |
| 15 ಲಕ್ಷಕ್ಕಿಂತ ಮೇಲ್ಪಟ್ಟು | 30% | 15 ಲಕ್ಷಕ್ಕಿಂತ ಮೇಲ್ಪಟ್ಟು | 30% |

**ಕಾರ್ಪೊರೇಟ್ ತೆರಿಗೆ:** ಭಾರತದ ಅಭಿವೃದ್ಧಿಯ ಗುರಿಗಳಿಗೆ ಬೆಂಬಲವಾಗಿ ಹೆಚ್ಚು ವಿದೇಶಿ ಬಂಡವಾಳ ಸೆಳೆಯುವ ಪ್ರಯತ್ನವಾಗಿ ಸರ್ಕಾರವು ವಿದೇಶಿ ಕಂಪನಿಗಳ ಮೇಲಿನ ಕಾರ್ಪೊರೇಟ್ ತೆರಿಗೆಯನ್ನು ಶೇ.40ರಿಂದ 35ಕ್ಕೆ ಇಳಿಸಲಿದೆ.

**ಏಂಜಲ್ ತೆರಿಗೆ:** ನವೋದ್ಯಮಗಳಿಗೆ ಪೂರಕ ವಾತಾವರಣ ಒದಗಿಸುವ ದೃಷ್ಟಿಯಿಂದ ಸರ್ಕಾರ ಎಲ್ಲ ವರ್ಗಗಳ ಹೂಡಿಕೆದಾರರಿಗೆ ಏಂಜಲ್ ತೆರಿಗೆ ಸಂಪೂರ್ಣ ರದ್ದು ಮಾಡಲಿದೆ.

**ಷೇರು ಮರುಖರೀದಿ:** ಷೇರು ಖರೀದಿಯಿಂದ ಬಂದ ಆದಾಯಕ್ಕೆ ತೆರಿಗೆ ವಿಧಿಸಲಾಗುತ್ತದೆ; ಯಾಕೆಂದರೆ ಅದು ಷೇರುದಾರರಿಗೆ ಲಾಭಾಂಶವಾಗಿರುತ್ತದೆ. ಚಾಲ್ತಿಯಲ್ಲಿರುವ ತೆರಿಗೆ ಪದ್ಧತಿಯಲ್ಲಿ ಹೆಚ್ಚುವರಿ ಆದಾಯದ ತೆರಿಗೆಯನ್ನು ಕಂಪನಿ ಮೇಲೆ ಹೊರಿಸಲಾಗುತ್ತದೆ. ಇದರ ಜೊತೆಗೆ ಈ ಷೇರುಗಳ ವೆಚ್ಚವನ್ನು ಹೂಡಿಕೆದಾರರಿಗೆ ಬಂಡವಾಳ ನಷ್ಟ ಎಂದು ಪರಿಗಣಿಸಲಾಗುತ್ತದೆ. ಮರುಖರೀದಿ ತೆರಿಗೆಯನ್ನು ಮೊದಲು ಜಾರಿಗೆ ತಂದಿದ್ದು 2013ರಲ್ಲಿ ಲಿಸ್ಟ್ ಮಾಡದೇ ಇರುವ ಕಂಪನಿಗಳ ಮೇಲೆ. ಅದನ್ನು ಲಿಸ್ಟ್ ಮಾಡಲಾದ ಕಂಪನಿಗಳಿಗೂ ವಿಸ್ತರಿಸಿದ್ದು 2019ರಲ್ಲಿ.

**ಟಿಡಿಎಸ್ ಮತ್ತು ಟಿಸಿಎಸ್:** ಇ–ಕಾಮರ್ಸ್ ನಿರ್ವಾಹಕರಿಗೆ ವಿಧಿಸಲಾಗುತ್ತಿದ್ದ ಟಿಡಿಎಸ್ ದರವನ್ನು ಶೇ.1ರಿಂದ ಶೇ.0.1ಕ್ಕೆ ಇಳಿಸಲಾಗುತ್ತದೆ. ಸಂಬಳದ ಮೇಲಿನ ಟಿಡಿಎಸ್‌ಗೆ ಪ್ರತಿಯಾಗಿ ಟಿಸಿಎಸ್‌ನ್ನು ವಿಧಿಸಲಾಗುತ್ತದೆ. ಧರ್ಮದತ್ತಿಗಳು, ಟಿಡಿಎಸ್ ದರಗಳು, ಮರು ಮೌಲ್ಯಮಾಪನದ ನಿಯಮಗಳು, ಶೋಧನಾ ಕಾರ್ಯಾಚರಣೆ & ಬಂಡವಾಳ ಗಳಿಕೆ ಮೇಲಿನ ತೆರಿಗೆ ನಿಯಮ ಸರಳಗೊಳಿಸುವ ಉದ್ದೇಶ ಹಣಕಾಸು ಮಸೂದೆಗಿದೆ.

**ಟಿಡಿಎಸ್ ಸಲ್ಲಿಕೆ:** ಟಿಡಿಎಸ್ ಪಾವತಿ ವಿಳಂಬಕ್ಕೆ ಇದ್ದ ಕ್ರಿಮಿನಲ್ ಬಾಧ್ಯತೆಯನ್ನು 2024ರ ಕೇಂದ್ರ ಬಜೆಟ್ ತೆಗೆದುಹಾಕಿದೆ. ಟಿಡಿಎಸ್ ಸುಸ್ತಿಗೆ ಸ್ಪಷ್ಟ ಮಾರ್ಗಸೂಚಿಗಳನ್ನು ರೂಪಿಸಲು ಸರ್ಕಾರ ನಿರ್ಧರಿಸಿದೆ ಮತ್ತು ದಂಡದ ಲೆಕ್ಕಾಚಾರವನ್ನು ಕೂಡ ಸರಳಗೊಳಿಸಲಿದೆ.

ಬಾಟಮ್ ಲೈನ್: 2024–25ರ ಸಾಲಿನ ಕೇಂದ್ರ ಬಜೆಟ್‌ನ್ನು ಆರ್ಥಿಕ ಬೆಳವಣಿಗೆ ಮತ್ತು ಅಭಿವೃದ್ಧಿ ಮೇಲೆ ಗಮನ ಕೇಂದ್ರೀಕರಿಸಲಾಗಿರುವ ಮುಂಗಡ ಪತ್ರ ಎಂದು ಕರೆಯಲಾಗಿದೆ. ಜೊತೆಗೆ ಉದ್ಯೋಗ ಸೃಷ್ಟಿ ಹಾಗೂ ಅರ್ಥ ವ್ಯವಸ್ಥೆಯ ಉತ್ತೇಜನಕ್ಕೆ ಹೆಚ್ಚು ಒತ್ತು ನೀಡಲಾಗಿದೆ. ಮೂಲಸೌಕರ್ಯ, ಆರೋಗ್ಯ ಸೇವೆ, ಶಿಕ್ಷಣ ಮತ್ತು ಡಿಜಿಟಲ್ ಆವಿಷ್ಕಾರಕ್ಕಾಗಿ ಭರಪೂರ ಹೂಡಿಕೆಗೆ ಅವಕಾಶ ನೀಡುವ ಮೂಲಕ ಎಲ್ಲವನ್ನೂ ಒಳಗೊಳ್ಳುವ ಅಭಿವೃದ್ಧಿಯ ಗುರಿಯನ್ನು ಹೊಂದಲಾಗಿದೆ.

**ಮೂಲ: ಕೇಂದ್ರ ಬಜೆಟ್ 2024–25**

ಇಷ್ಟು ಮಾತ್ರವಲ್ಲದೆ ವೇತನದಾರರಿಗೆ ಇರುವ ಸ್ಟಾಂಡರ್ಡ್ ಡಿಡಕ್ಷನ್ನು ರೂ.50000ದಿಂದ 75000ಕ್ಕೆ ಹೆಚ್ಚಿಸಲಾಗಿದೆ ಮತ್ತು ಪಿಂಚಣಿದಾರರ ಕುಟುಂಬ ಪಿಂಚಣಿಯ ಮೇಲಿನ ಕಡಿತವನ್ನು ರೂ.15000ದಿಂದ 25000ಕ್ಕೆ ಹೆಚ್ಚಿಸಲಾಗಿದೆ.

**ಬಂಡವಾಳ ಗಳಿಕೆ ಮೇಲೆ ತೆರಿಗೆ:**

1. ಎಲ್ಲ ಹಣಕಾಸು ಮತ್ತು ಹಣಕಾಸೇತರ ಆಸ್ತಿಗಳ ಮೇಲಿನ ದೀರ್ಘಾವಧಿ ಗಳಿಕೆ ಮೇಲೆ ಶೇ.12.5.
2. ಹಣಕಾಸು ಆಸ್ತಿಗಳ ಮೇಲಿನ ಅಲ್ಪಾವಧಿ ಗಳಿಕೆ ತೆರಿಗೆ ದರ ಶೇ.20.
3. ಹಣಕಾಸು ಆಸ್ತಿಗಳ ಮೇಲಿನ ಬಂಡವಾಳ ಗಳಿಕೆಯ ವಿನಾಯ್ತಿ ಮಿತಿಯನ್ನು ಪ್ರತಿ ವರ್ಷಕ್ಕೆ 1 ಲಕ್ಷ ರೂಪಾಯಿಯಿಂದ 2 ಲಕ್ಷಕ್ಕೆ ಹೆಚ್ಚಿಸಲಾಗಿದೆ.

**ಸೆಕ್ಯುರಿಟಿ ವಹಿವಾಟು ತೆರಿಗೆ (ಎಸ್‌ಟಿಟಿ):** ಚಿಲ್ಲರೆ ಹೂಡಿಕೆದಾರರು ಅಪಾಯಕಾರಿ ಫ್ಯೂಚರ್ & ಆಪ್ಷನ್ (ಎಫ್&ಒ) ವಹಿವಾಟನ್ನು ನಿಯಂತ್ರಿಸಲು ಈ ವಹಿವಾಟುಗಳ ಮೇಲಿನ ಎಸ್‌ಟಿಟಿಯನ್ನು ಹೆಚ್ಚಿಸಲಾಗುತ್ತದೆ. ಫ್ಯೂಚರ್‌ಗಳ ಮೇಲಿನ ಎಸ್‌ಟಿಟಿಯನ್ನು ಶೇ.0.0125 ರಿಂದ ಶೇ.0.02ಕ್ಕೆ ಮತ್ತು ಆಪ್ಷನ್‌ಗಳ ಮೇಲಿನ ಎಸ್‌ಟಿಟಿಯನ್ನು ಶೇ.0.0625 ರಿಂದ ಶೇ.0.1ಕ್ಕೆ ಹೆಚ್ಚಿಸಲಾಗಿದೆ.

**ಮ್ಯುಚ್ಯುಯಲ್ ಫಂಡ್‌ಗಳ ಮೇಲಿನ ತೆರಿಗೆ (ದೇಶೀಯ ಮತ್ತು ಅನಿವಾಸಿ):**

| ಉತ್ಪನ್ನ | 2024ರ ಜುಲೈ 23ಕ್ಕೂ ಮುನ್ನ | | | 2024ರ ಜುಲೈ 23ರ ಬಳಿಕ | | |
|---|---|---|---|---|---|---|
| | ಕಾಯ್ದಿರಿಸುವ ಅವಧಿ | ಎಸ್‌ಟಿಸಿಜಿ ತೆರಿಗೆ | ಎಲ್‌ಟಿಸಿಜಿ ತೆರಿಗೆ | ಕಾಯ್ದಿರಿಸುವ ಅವಧಿ | ಎಸ್‌ಟಿಸಿಜಿ ತೆರಿಗೆ | ಎಲ್‌ಟಿಸಿಜಿ ತೆರಿಗೆ |
| ಈಕ್ವಿಟಿ ಆಧಾರಿತ MF | >12 ತಿಂಗಳು | 15.00% | 10.00% | >12 ತಿಂಗಳು | 20.00% | 12.50% |
| ಶೇ.65ಕ್ಕಿಂತ ಹೆಚ್ಚು ಡೆಟ್‌ನಲ್ಲಿರುವ ನಿರ್ದಿಷ್ಟ ಮುಚ್ಯುಯಲ್ ಫಂಡ್ | NA | ಸ್ಲ್ಯಾಬ್ ದರ | ಸ್ಲ್ಯಾಬ್ ದರ* | NA | ಸ್ಲ್ಯಾಬ್ ದರ | ಸ್ಲ್ಯಾಬ್ ದರ* |
| ಈಕ್ವಿಟಿ FOFಗಳು | NA | ಸ್ಲ್ಯಾಬ್ ದರ | ಸ್ಲ್ಯಾಬ್ ದರ | >24 ತಿಂಗಳು | ಸ್ಲ್ಯಾಬ್ ದರ | 12.50% |
| ಸಾಗರೋತ್ತರ FoF | NA | ಸ್ಲ್ಯಾಬ್ ದರ | ಸ್ಲ್ಯಾಬ್ ದರ | >24 ತಿಂಗಳು | ಸ್ಲ್ಯಾಬ್ ದರ | 12.50% |
| ಚಿನ್ನದ MF | NA | ಸ್ಲ್ಯಾಬ್ ದರ | ಸ್ಲ್ಯಾಬ್ ದರ | >24 ತಿಂಗಳು | ಸ್ಲ್ಯಾಬ್ ದರ | 12.50% |

#ನಿರ್ದಿಷ್ಟ ಮುಚ್ಯುಯಲ್ ಫಂಡ್ ಯೋಜಗಳು ವ್ಯಾಖ್ಯಾನವನ್ನು ಹೀಗೆ ಪರಿಷ್ಕರಿಸಲಾಗಿದೆ: ಎ) ಡೆಟ್ ಮತ್ತು ಹಣಕಾಸು ಮಾರುಕಟ್ಟೆ ಸಾಧನಗಳಲ್ಲಿ ಶೇ.65ಕ್ಕೂ ಅಧಿಕ ಹೂಡಿಕೆ ಮಾಡಿದ ಎಂಎಫ್ ಯೋಜನೆ; ಮತ್ತು ಬಿ) ಮೇಲಿನ (ಎ) ವಿಭಾಗದಲ್ಲಿ ಉಲ್ಲೇಖಿಸಿದ ಎಂಎಫ್ ಯೋಜನೆಯಲ್ಲಿ ಶೇ.65 ಅಥವಾ ಅದಕ್ಕಿಂತ ಹೆಚ್ಚಿನ ಎಫ್‌ಒಎಫ್ ಹೂಡಿಕೆ.

*ಡೆಟ್‌ನಲ್ಲಿ ಶೇ.65ಕ್ಕಿಂತ ಹೆಚ್ಚು ಹೂಡಿಕೆಯನ್ನು ಹೊಂದಿರುವ ನಿರ್ದಿಷ್ಟ ಮುಚ್ಯುಯಲ್ ಫಂಡ್ ಮೇಲಿನ ಗಳಿಕೆಯನ್ನು ಯಾವತ್ತೂ ಎಸ್‌ಟಿಸಿಜಿ ಎಂದು ಪರಿಗಣಿಸಲಾಗುತ್ತದೆ.

# ಹೂಡಿಕೆ ನಿರ್ವಹಣೆಗೆ ಅಳತೆಗೋಲು



**ಹೂಡಿಕೆ** ಮಾಡಲು ಹೊರಟವೆಂದರೆ ಪ್ರತಿ ಕಾಸಿನ ಮೌಲ್ಯವೂ ನಮಗೆ ಮುಖ್ಯ. ಯಾಕೆಂದರೆ ನಾವದನ್ನು ಕಠಿಣ ಪರಿಶ್ರಮದಿಂದ ಸಂಪಾದಿಸಿದ್ದಾಗಿದೆ. ಹಾಗಾಗಿ ಯಾವುದೇ ಹೂಡಿಕೆ ನಿರ್ಧಾರಗಳನ್ನು ಮಾಡುವುದಕ್ಕೂ ಮುನ್ನ ಪ್ರತಿಯೊಂದು ಮ್ಯುಚ್ಯುಯಲ್ ಫಂಡ್ ನಿರ್ವಹಣೆಯನ್ನು ಅತ್ಯಂತ ಕರಾರುವಕ್ಕಾಗಿ ಅಳೆಯುತ್ತೇವೆ. ಮ್ಯುಚ್ಯುಯಲ್ ಫಂಡ್ ಹೂಡಿಕೆದಾರರಲ್ಲಿ ಬಹುತೇಕರು ನಿರ್ವಹಣೆಯ ಮೌಲ್ಯಮಾಪನಕ್ಕೆ ಸಾಮಾನ್ಯವಾಗಿ ಬಳಸುವ ಮಾನದಂಡವೆಂದರೆ ಈ ಹಿಂದೆ ದಕ್ಕಿದ ಆದಾಯ ಎಷ್ಟು ಎಂಬುದರ ಲೆಕ್ಕಾಚಾರದ ಮೇಲೆ.

ಒಂದು ಹೂಡಿಕೆಯ ಈ ಹಿಂದಿನ ಆದಾಯದ ಲೆಕ್ಕಾಚಾರ ಹಾಕಲು ಹತ್ತು ಹಲವು ದಾರಿಗಳಿದ್ದರೂ ಕೂಡ ಎರಡು ಅತ್ಯಂತ ಸಾಮಾನ್ಯ ಮಾನದಂಡಗಳೆಂದರೆ ಆದಿಯಿಂದ ಅಂತ್ಯದ ವರೆಗಿನ ಆದಾಯ (Point to Point Returns) ಮತ್ತು ವಾರ್ಷಿಕ ಆದಾಯ (Rolling Returns). ಈ ಆದಾಯಗಳ ಮರ್ಮ ಏನು ಎಂಬುದನ್ನು ಅರ್ಥ ಮಾಡಿಕೊಳ್ಳದೇ ಇದ್ದರೆ ಉತ್ತಮ ಹೂಡಿಕೆ ಆಯ್ಕೆ ಯಾವುದು ಎಂಬುದನ್ನು ನಿರ್ಧರಿಸುವುದು ಕಷ್ಟವಾಗುತ್ತದೆ.

ಈ ಲೇಖನದಲ್ಲಿ ಎರಡೂ ವಿಧಾನಗಳ ಬಗೆಗೆ ಸೋದಾಹರಣವಾಗಿ ವಿವರಿಸಲಿದ್ದೇವೆ. ಅವುಗಳ ನಡುವೆ ಇರುವ ವತ್ಯಾಸಗಳ ಬಗ್ಗೆ ತಿಳಿಸಿಕೊಡುತ್ತ ಈ ಆದಾಯ ಹೇಗೆ ವ್ಯಾಖ್ಯಾನ ಮಾಡುವುದು ಎಂಬುದಕ್ಕೆ ಮಾರ್ಗದರ್ಶನವನ್ನೂ ಒದಗಿಸುತ್ತೇವೆ.

**ಆದಿಯಿಂದ ಅಂತ್ಯದ ವರೆಗಿನ ಆದಾಯ (ಪಾಯಿಂಟು ಪಾಯಿಂಟ್ ರಿಟರ್ನ್ಸ್):** ಈ ವಿಧಾನದಲ್ಲಿ ಒಂದು ನಿರ್ದಿಷ್ಟ ಆರಂಭದ ಹಂತದಿಂದ ಕೊನೆಯ ಹಂತದ ವರೆಗಿನ ಹೂಡಿಕೆಯ ಆದಾಯವನ್ನು ಲೆಕ್ಕ ಹಾಕಲಾಗುತ್ತದೆ. ಇದು ಒಂದು ನಿರ್ದಿಷ್ಟ ಕಾಲಮಿತಿಯಲ್ಲಿನ ನಿರ್ವಹಣೆಯನ್ನು ತೋರಿಸುತ್ತದೆ.ಬದಲಾಗಿ ಅದರಿಂದಾಚೆಗಿನ ನಿರ್ವಹಣೆಯನ್ನು ತೋರಿಸುವುದಿಲ್ಲ. ಇದನ್ನು ಲೆಕ್ಕಹಾಕುವುದೇನು ಕಷ್ಟವಲ್ಲ. ಉದಾಹರಣೆಗೆ:

| ಒಂದು ವರ್ಷದ ಪಾಯಿಂಟು ಪಾಯಿಂಟ್ ರಿಟರ್ನ್ಸ್ | | 5 ವರ್ಷದ ಪಾಯಿಂಟು ಪಾಯಿಂಟ್ ರಿಟರ್ನ್ಸ್ | |
|---|---|---|---|
| ದಿನಾಂಕ | NAV | ದಿನಾಂಕ | NAV |
| 31/03/2023 | 100 | 31/03/2019 | 64 |
| 31/03/2024 | 117 | 31/03/2024 | 117 |
| ಸಿಎಜಿಆರ್ - *17%* | | ಸಿಎಜಿಆರ್ - *12.82%* | |

**ಮಿತಿಗಳು:** ಕೇವಲ ಈ ಆದಾಯಗಳನ್ನು ಮಾತ್ರ ನೋಡಿಕೊಂಡು ಅಂತಿಮ ನಿರ್ಧಾರಕ್ಕೆ ಬರುವುದರಿಂದ ಸರಿಯಾದ ಚಿತ್ರ ಲಭ್ಯವಾಗದೇ ಇರಬಹುದು. ಉದಾಹರಣೆಗೆ, ಎರಡು ಫಂಡ್‌ಗಳು ಒಂದೇ ರೀತಿಯ ಆದಾಯವನ್ನು ಕೊಡುತ್ತಿದ್ದರೆ ಯಾವುದು ಹೆಚ್ಚು ಏರಿಳಿತವನ್ನು ಹೊಂದಿದೆ ಎಂಬುದನ್ನು ಪತ್ತೆ ಮಾಡಲು ಕಷ್ಟವಾಗುತ್ತದೆ. ವಿವರಣೆಯ ಮೂಲಕ ಇದನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡೋಣ.

ಒಂದು ವೇಳೆ ಫಂಡ್ ಎ ಮತ್ತು ಫಂಡ್ ಬಿ ಎರಡೂ ಕಳೆದ ಐದು ವರ್ಷಗಳಲ್ಲಿ ಕರಾರುವಕ್ಕಾಗಿ ಶೇ.10ರಷ್ಟು ಆದಾಯವನ್ನು ನೀಡಿದೆ ಅಂತಿಟ್ಟುಕೊಳ್ಳಿ.ಈ ಚಿತ್ರ ಇಬ್ಬರಿಗೂ ಅತ್ಯುತ್ತಮವಾಗಿ ಕಾಣಬಹುದು.ಪಾಯಿಂಟು ಪಾಯಿಂಟ್ ರಿಟರ್ನ್ಸ್‌ನಲ್ಲಿ ಐದು ವರ್ಷಗಳ ಪಯಣದ ಚಿತ್ರಣವನ್ನು ನಮಗೆ ತೋರಿಸುವುದಿಲ್ಲ. ಫಂಡ್ 'ಎ' ಹಿಂದಿನ ಐದು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ ನಿರಂತರ ಪ್ರಗತಿಯನ್ನು ತೋರಿಸಿರಬಹುದು.ಆದರೆ ಫಂಡ್-ಬಿ ಮೊದಲ ವರ್ಷ ಶೇ.50ರಷ್ಟು ಅಭೂತಪೂರ್ವ ಆದಾಯವನ್ನು ಕೊಟ್ಟಿರುತ್ತದೆ ಅದಾದ ನಾಲ್ಕು ವರ್ಷಗಳ ಕಾಲ ಸಪಾಟಾದ ಅಥವಾ ಸಣ್ಣಮಟ್ಟಿನ ಋಣಾತ್ಮಕ ಆದಾಯ ನೀಡಿರುತ್ತದೆ.ಅಂದರೆ ಐದು ವರ್ಷಗಳ ಕಾಲ ಸರಾಸರಿ ಶೇ.10ರಷ್ಟು ಮಾತ್ರ ಆದಾಯ ಬಂದಂತಾಗುತ್ತದೆ.ಇಲ್ಲಿ ಫಂಡ್ ಬಿ ತೀರಾ ಏರಿಳಿತಗಳನ್ನು ಒಳಗೊಂಡ ಅತ್ಯಂತ ಅಪಾಯಕಾರಿ ಆಯ್ಕೆಯಾಗಬಹುದು. ಆದರೆ ಶೇ.10ರಷ್ಟು ಪಾಯಿಂಟು ಪಾಯಿಂಟ್ ರಿಟರ್ನ್ಸ್ ವಿಧಾನವನ್ನು ಗಮನಿಸಿದರೆ ಎರಡೂ ಫಂಡ್‌ಗಳ ಹಿಂದಿನ ನಿರ್ವಹಣೆಯಲ್ಲಿನ ಏರಿಳಿತದ ಬಗ್ಗೆ ಯಾವುದೇ ಸ್ಪಷ್ಟ

ಚಿತ್ರಣವನ್ನು ನೀಡುವುದಿಲ್ಲ. ಆದಾಯಗಳಲ್ಲಿನ ಹಿನ್ನಡೆಯಿಂದಾಗಿ ಮೇಲಿನ ಎರಡೂ ಚಿತ್ರಗಳ ನಡುವಿನ ವ್ಯತ್ಯಾಸಗಳು ಕಾಣಿಸುವುದಿಲ್ಲ. ಅವು ನಮಗೆ ಅಂತಿಮ ಫಲಿತಾಂಶವನ್ನು ಮಾತ್ರ ತಿಳಿಸುತ್ತವೆ. ಆದರೆ ಆ ಅಂತಿಮ ಫಲ ಸಿಗಲು ಕ್ರಮಿಸಿದ ದಾರಿಯ ಚಿತ್ರಣ ಸಿಗುವುದಿಲ್ಲ.

ಫಂಡ್‌ಗಳ ಪಾಯಿಂಟು ಪಾಯಿಂಟ್ ರಿಟರ್ನ್ಸ್ ವಿಧಾನದಲ್ಲಿ ನಿರ್ವಹಣೆಯ ಭಿನ್ನ ಚಿತ್ರವೇ ಕಾಣುತ್ತದೆ. ಆರಂಭಿಕ ದಿನಾಂಕದಲ್ಲಿ ಏನಾಗಿದೆ ಮತ್ತು ಕೊನೆಯ ದಿನಾಂಕ ಎಂತಹ ಫಲಿತಾಂಶ ಕೊಟ್ಟಿದೆ ಎಂಬುದಷ್ಟೇ ನಮಗೆ ತಿಳಿಯುತ್ತದೆ. ಅಷ್ಟೂ ಅವಧಿಯಲ್ಲಿ ಒಂದು ಯೋಜನೆ ಕಳಪೆ ನಿರ್ವಹಣೆ ತೋ–ರಿರಬಹುದು, ಆದರೆ ಅದು ಕೊನೆಯ ಕೆಲವು ದಿನಗಳಲ್ಲಿ ಒಟ್ಟಾರೆ ನಿರ್ವಹಣೆ ಸುಧಾ–ರಿಸಬಹುದು ಅಥವಾ ಆಗದೇ ಇರಬಹುದು. ಉದಾಹರಣೆಗೆ, ಮೂರು ವರ್ಷಗಳ ಹಿಂದೆ ಒಂದು ಮ್ಯುಚ್ಯುಯಲ್ ಫಂಡ್‌ನಲ್ಲಿ ಹೂಡಿಕೆ ಮಾಡಲಾಗಿದೆ ಎಂದು ಊಹಿಸೋಣ. ಈ ನಡುವಿನ ಅವಧಿಯಲ್ಲಿ ಯೋಜನೆಯ ಒಟ್ಟು ಆಸ್ತಿ ಮೌಲ್ಯ (NAV) ದುಪ್ಪಟ್ಟಾಗಿದೆ. ಆದರೆ ಉಳಿದ ಫಂಡ್‌ಗಳಿಗೆ ಹೋಲಿಸಿದರೆ ಮೊದಲ ಎರಡು ವರ್ಷಗಳಲ್ಲಿ ಅದು ಅತ್ಯಂತ ನೀರಸ ಆದಾಯವನ್ನು ನೀಡಿದೆ. ಯೋಜನೆ ಅತ್ಯುತ್ತಮ ನಿರ್ವಹಣೆ ತೋರಿದ್ದು ಕಳೆದ ಒಂದು ವರ್ಷಗಳ ಅವಧಿಯಲ್ಲಿ ಮಾತ್ರ. ಕೇವಲ ಒಂದು ವರ್ಷದ ಪಾಯಿಂಟು ಪಾಯಿಂಟ್ ರಿಟರ್ನ್ಸ್ ಲೆಕ್ಕ ಹಾಕಿದರೆ ಆಗ ಕಾಣುವ ಪ್ರಖರವಾದ ಚಿತ್ರ ದಾರಿತಪ್ಪಿಸುವಂತಹುದಾಗಿದೆ.

**ರೋಲಿಂಗ್ ರಿಟರ್ನ್ಸ್:** ರೋಲಿಂಗ್ ರಿಟರ್ನ್ಸ್‌ನ್ನು ಒಂದು, ಮೂರು, ಐದು ವರ್ಷಗಳ ರೀತಿಯಲ್ಲಿ ವಾರ್ಷಿಕ ಸರಾಸರಿ ಆದಾಯದ ರೂಪದಲ್ಲಿ ಲೆಕ್ಕ ಹಾಕಲಾಗುತ್ತದೆ. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ ಆಯ್ಕೆ ಮಾಡಿಕೊಂಡ ನಿರ್ದಿಷ್ಟ ಅವಧಿಗೆ ಎಲ್ಲ ಆದಾಯಗಳ ಸರಾಸರಿಯನ್ನು ಲೆಕ್ಕ ಹಾಕುವುದೇ ರೋಲಿಂಗ್ ರಿಟರ್ನ್ಸ್.

ಉದಾಹರಣೆಗೆ, ಮೂರು ವರ್ಷಗಳ ರೋಲಿಂಗ್ ರಿಟರ್ನ್ಸ್ ಒಟ್ಟಾರೆ ಹೂಡಿಕೆ ಅವಧಿಯ ಚೌಕಟ್ಟಿನಲ್ಲಿ ಪ್ರತಿ ಮೂರು ವರ್ಷ ಅವಧಿಗೆ ವಾರ್ಷಿಕ ಆದಾಯವನ್ನು ಲೆಕ್ಕಹಾಕುತ್ತದೆ.ರೋಲಿಂಗ್ ರಿಟರ್ನ್ಸ್‌ನ್ನು ಪ್ರತಿದಿನ, ವಾರಕ್ಕೊಮ್ಮೆ, ತಿಂಗಳಿಗೊಮ್ಮೆ ಅಥವಾ ವಾರ್ಷಿಕವಾಗಿಯೂ ಲೆಕ್ಕಹಾಕಬಹುದಾಗಿದೆ.

**ಅವಧಿ: 2009ರ ಜುಲೈ 31ರಿಂದ 2024ರ ಜುಲೈ 31ರ ವರೆಗೆ (ಐದು ವರ್ಷಗಳ ಕಾಲ ಪ್ರತಿದಿನದ ರೋಲಿಂಗ್)**

| ಅವಲೋಕನ | ದಿನಾಂಕದಿಂದ | NAV | ದಿನಾಂಕದ ವರೆಗೆ | NAV | ವಾರ್ಷಿಕ ಆದಾಯ |
|---|---|---|---|---|---|
| ಮೊದಲ 2 ಅವಲೋಕನ | ಜುಲೈ 31-2009 | 95 | ಜುಲೈ 31-2014 | 154.6 | 10.23 |
| | ಆಗಸ್ಟ್ 1-2009 | 96 | ಆಗಸ್ಟ್ 1-2014 | 161.77 | 11.00 |
| ಕೊನೆಯ 2ಅವಲೋಕನ | ಜುಲೈ 30-2019 | 316 | ಜುಲೈ 30-2024 | 707.74 | 17.5 |
| | ಜುಲೈ 31-2019 | 317 | ಜುಲೈ 31-2024 | 695.01 | 17 |
| ಸರಾಸರಿ ರೋಲಿಂಗ್ ರಿಟರ್ನ್ಸ್ (3654) ಅವಲೋಕನ | | | | | 13.93 |

2009ರ ಜುಲೈ 31ರಿಂದ 2024ರ ಜುಲೈ 31ರ ವರೆಗಿನ 15 ವರ್ಷಗಳ ಅವಧಿಗೆ ಫಂಡ್ ಒಂದರ ಐದು ವರ್ಷಗಳ ರೋಲಿಂಗ್ ರಿಟರ್ನ್ ಎಷ್ಟು ಎಂಬುದನ್ನು ನೋಡೋಣ. ಈ ಅವಧಿಯಲ್ಲಿ ಪ್ರತಿ ದಿನದಂತೆ ಐದು ವರ್ಷಗಳ ಆದಾಯವನ್ನು ಲೆಕ್ಕ ಹಾಕುವುದಾದರೆ– 2009ರ ಜುಲೈ 31, 2009ರ ಆಗಸ್ಟ್ ಒಂದು ಮತ್ತು 2024ರ ಜುಲೈ 31ರ ವರೆಗಿನ ಐದು ವರ್ಷಗಳ ಆದಾಯವನ್ನು ಲೆಕ್ಕಹಾಕಲಾಗುತ್ತದೆ. ಈ ಅವಧಿಯಲ್ಲಿ ಯಾವುದೇ ದಿನದಲ್ಲಿ ನೀವು ಮಾಡಿದ ಹೂಡಿಕೆಯ ವಿವರವಾದ ಆದ–ಾಯವನ್ನು ಅದು ತೋರಿಸುತ್ತದೆ.

ಹೆಚ್ಚು ಅವಲೋಕನದೊಂದಿಗೆ ಹೇಳುವುದಾದರೆ ರೋಲಿಂಗ್ ರಿಟರ್ನ್ ನಾನಾ ಮಾರುಕಟ್ಟೆ ಪರಿಸ್ಥಿತಿಗಳಲ್ಲಿ ಫಂಡ್‌ನ ಸಮಗ್ರ ನಿರ್ವಹಣೆಯನ್ನು ಒದಗಿಸುತ್ತದೆ. ಇದ–ರಿಂದ ಫಂಡ್‌ನ ಸ್ಥಿರತೆಯನ್ನು ಗುರುತಿಸಲು ಸಾಧ್ಯವಾಗುತ್ತದೆ.

ಇದರಲ್ಲಿ ಇರುವ ಒಂದು ಮಿತಿ ಏನೆಂದರೆ ಪಾಯಿಂಟ್ ಟು ಪಾಯಿಂಟ್ ರಿಟರ್ನ್ಸ್‌ಗೆ ಹೋಲಿಸಿದರೆ ರೋಲಿಂಗ್ ರಿಟರ್ನ್ಸ್ ಹೆಚ್ಚು ಸಂಕೀರ್ಣವಾಗಿದೆ.

**ಬಾಟಮ್ ಲೈನ್:** ಪಾಯಿಂಟ್ ಟು ಪಾಯಿಂಟ್ ರಿಟರ್ನ್ಸ್ ಮತ್ತು ರೋಲಿಂಗ್ ರಿಟರ್ನ್ಸ್ ಎರಡೂ ಹೂಡಿಕೆ ನಿರ್ವಹಣೆಯ ಬಗ್ಗೆ ಅತ್ಯಂತ ಮೌಲ್ಯಯುತವಾದ ಒಳನೋಟವನ್ನು ಒದಗಿಸುತ್ತದೆ. ಪಾಯಿಂಟ್ ಟು ಪಾಯಿಂಟ್ ರಿಟರ್ನ್ಸ್ ಎರಡು ನಿರ್ದಿಷ್ಟ ದಿನಾಂಕಗಳ ನಡುವಿನ ನಿರ್ವಹಣೆಯ ನೇರಾನೇರ ಚಿತ್ರಣವನ್ನು ಒದಗಿಸುತ್ತದೆ.ಇದು ಅಲ್ಪಾವಧಿ ಮೌಲ್ಯಮಾಪನ ಮತ್ತು ಹೋಲಿಕೆಗೆ ಸೂಕ್ತವಾದುದಾಗಿದೆ.ರೋಲಿಂಗ್ ರಿಟರ್ನ್ಸ್ ಇದಕ್ಕೆ ತದ್ವಿರುದ್ಧ. ಇದು ಹೆಚ್ಚು ಸಮಗ್ರ ದೃಷ್ಟಿಕೋನವನ್ನು ನಿಮಗೆ ಒದಗಿಸುತ್ತದೆ.ನಾನಾ ಅವಧಿಗಳಲ್ಲಿ ದಕ್ಕುವ ಸ್ಥಿರವಾದ ನಿರ್ವಹಣೆ ಮತ್ತು ಏರಿಳಿತಗಳನ್ನು ನಮ್ಮ ಮುಂದೆ ಮಂಡಿಸುತ್ತದೆ.ಇದು ಸುದೀರ್ಘಾವಧಿ ಹೂಡಿಕೆದಾರರಿಗೆ ಹೆಚ್ಚು ಸೂಕ್ತವಾದುದು.

ಹೂಡಿಕೆದಾರರು ತಮ್ಮ ಹೂಡಿಕೆಯ ಜಾತಕವನ್ನು ಸಂಪೂರ್ಣವಾಗಿ ಅರ್ಥ ಮಾಡಿಕೊಳ್ಳಲು ಎರಡೂ ಮಾನದಂಡಗಳನ್ನು ಪರಿಗಣಿಸುವುದು ಉತ್ತಮ. ಇದರಿಂದ ಮಾಹಿತಿಪೂರ್ಣ ನಿರ್ಧಾರವನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ.ಈ ಕ್ರಮಗಳನ್ನು ತಿಳಿದುಕೊಳ್ಳುವುದರಿಂದ ನಿಮ್ಮ ಹೂಡಿಕೆಯ ಹಿಂದಿನ ನಿರ್ವಹಣೆಯ ಮೌಲ್ಯಮಾಪನವನ್ನು ಸಮರ್ಪಕವಾಗಿ ಮಾಡಲು ಸಾಧ್ಯವಾಗುತ್ತದೆ ಮತ್ತು ಭವಿಷ್ಯದ ಆದಾಯಕ್ಕೆ ಇದು ಹೆಚ್ಚು ಸೂಕ್ತ.

**ಸೂಚನೆ:** ಪಾಯಿಂಟ್ ಟು ಪಾಯಿಂಟ್ ರಿಟರ್ನ್ಸ್ ಮತ್ತು ರೋಲಿಂಗ್ ರಿಟರ್ನ್ಸ್ ಎರಡೂ ಕೂಡ ಹಿಂದಿನ ದತ್ತಾಂಶಗಳನ್ನು ಅವಲಂಬಿಸಿರುತ್ತದೆ ಎಂಬುದನ್ನು ನೆನಪಿಟ್ಟುಕೊಳ್ಳಬೇಕು. ಹಿಂದಿನ ನಿರ್ವಹಣೆ ಭವಿಷ್ಯದ ಫಲಿತಾಂಶಕ್ಕೆ ದಿಕ್ಸೂಚಿಂ–ರುಲ್ಲ ಎಂಬುದನ್ನೂ ಮರೆಯಬಾರದು.ಈ ಮಾನದಂಡಗಳಿಂದ ಮೌಲ್ಯಯುತವಾದ ಒಳನೋಟವನ್ನು ಪಡೆಯುವ ಹೊತ್ತಿನಲ್ಲಿ ಫಂಡ್‌ನ ಹೂಡಿಕೆ ಉದ್ದೇಶ, ಪೋರ್ಟ್‌ಫೋಲಿಯೋ ಸಂಯೋಜನೆ ಮತ್ತು ಹೂಡಿಕೆ ನಿರ್ಧಾರಗಳನ್ನು ಕೈಗೊಳ್ಳುವ ಸಂದರ್ಭದಲ್ಲಿನ ಖರ್ಚಿನ ಸರಾಸರಿ ಮುಂತಾದ ಅಂಶಗಳನ್ನು ಕೂಡ ಗಮನದಲ್ಲಿ ಇಟ್ಟುಕೊಳ್ಳಬೇಕು.

# ಎನ್‌ಆರ್‌ಐಗಳಿಗೂ ಇದೆ ಆರೋಗ್ಯ ವಿಮೆ



**ಅನಿವಾಸಿ** ಭಾರತೀಯನಾಗಿ (ಎನ್‌ಆರ್‌ಐ) ವಿದೇಶದಲ್ಲಿ ವಾಸಿಸುವುದು ಒಂದು ವಿಶಿಷ್ಟ ಅನುಭವ. ವಿದೇಶದಲ್ಲಿ ನೀವು ಬದುಕನ್ನು ಕಟ್ಟಿಕೊಳ್ಳುತ್ತಿರುವ ಹೊತ್ತಿನಲ್ಲಿಯೇ ಭಾರತದಲ್ಲಿ ನಿಮ್ಮ ಆರೋಗ್ಯ ಸೇವಾ ಸೌಲಭ್ಯದ ಬಗ್ಗೆ ಕಾಳಜಿ ವಹಿಸುವುದು ಅತ್ಯಂತ ನಿರ್ಣಾಯಕ. ಆಗ ಅಗತ್ಯವಿರುವುದೇ ಎನ್‌ಆರ್‌ಐ ಆರೋಗ್ಯ ವಿಮೆ.ಭಾರತಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಯಾವುದೇ ವೈದ್ಯಕೀಯ ತುರ್ತು ಅಗತ್ಯ ಉಂಟಾದರೆ ನಿಮ್ಮ ಹಣ-ಕಾಸು ಯೋಗಕ್ಷೇಮವನ್ನು ನೋಡಿಕೊಳ್ಳುವುದು ಈ ವಿಮೆ.ಈ ಎನ್‌ಆರ್‌ಐ ಆರೋಗ್ಯ ವಿಮಾ ಪಾಲಿಸಿ ಹೇಗೆ ನಿಮ್ಮ ಆರೋಗ್ಯಕ್ಕೆ ಭದ್ರತೆ ಒದಗಿಸುತ್ತದೆ ಎಂಬುದನ್ನು ಈ ಲೇಖನದ ಮೂಲಕ ತಿಳಿದುಕೊಳ್ಳಲು ಪ್ರಯತ್ನಿಸೋಣ.

**ಎನ್‌ಆರ್‌ಐ ಮತ್ತು ಆರೋಗ್ಯ ವಿಮೆ ಅರ್ಹತೆ:** ಭಾರತೀಯ ಪ್ರಜೆಯೊಬ್ಬ ವರ್ಷದಲ್ಲಿ 182ಕ್ಕಿಂತ ಹೆಚ್ಚು ದಿನ ಇನ್ನೊಂದು ದೇಶದಲ್ಲಿ ವಾಸಿಸುತ್ತಿದ್ದರೆ ಆತನನ್ನು ಅನಿವಾಸಿ ಭಾರತೀಯ (ಎನ್‌ಆರ್‌ಐ) ಎಂದು ಕರೆಯಲಾಗುತ್ತದೆ. ಈ ಸ್ಥಾನಮಾನ ಕೆಲವು ಪ್ರಯೋಜನಗಳ ವಿಚಾರದಲ್ಲಿ ನಿಮ್ಮ ಅರ್ಹತೆಯ ಮೇಲೆ ಪರಿಣಾಮ ಬೀರಬಹುದು. ಅವುಗಳಲ್ಲಿ ಆರೋಗ್ಯ ಸೇವಾ ಸೌಲಭ್ಯ ಕೂಡ ಒಂದು. ಆದರೆ ಗುಡ್ ನ್ಯೂಸ್ ಏನೆಂದರೆ ಎನ್‌ಆರ್‌ಐಗಳು, ಭಾರತೀಯ ಮೂಲದ ವ್ಯಕ್ತಿಗಳು (ಪಿಐಓಗಳು) ಮತ್ತು ಭಾರತದ ಸಾಗರೋತ್ತರ ಪ್ರಜೆ (ಓಸಿಐ)ಗಳು ಭಾರತದಲ್ಲಿ ಆರೋಗ್ಯ ವಿಮಾ ಯೋಜನೆಗಳನ್ನು ಖರೀದಿ ಮಾಡಬಹುದಾಗಿದೆ. ವಿಮಾದಾರರು ಹಾಗೂ ನಿರ್ದಿಷ್ಟ ಯೋಜನೆಯನ್ನು ಅವಲಂಭಿಸಿ ಅರ್ಹತಾ ಮಾನದಂಡಗಳಲ್ಲಿ ಸಣ್ಣಪುಟ್ಟ ಬದಲಾವಣೆಗಳು ಇರಬಹುದು.ಅದಕ್ಕಾಗಿ ನೇರವಾಗಿ ವಿಮಾ ಕಂಪನಿಯನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಬಹುದು.

**ಆರೋಗ್ಯ ವಿಮೆಯ ಅಗತ್ಯವೇನು:** ಇಂತಹ ಪರಿಸ್ಥಿತಿಯನ್ನು ಒಮ್ಮೆ ಊಹಿಸಿ: ನೀವು ಭಾರತದಲ್ಲಿರುವ ಕುಟುಂಬವನ್ನು ಭೇಟಿಯಾಗಲು ಬರುತ್ತೀರಿ ಮತ್ತು ಇಲ್ಲಿ ಅನಿ-ರೀಕ್ಷಿತ ವೈದ್ಯಕೀಯ ಪರಿಸ್ಥಿತಿಯನ್ನು ಎದು-ರಿಸಬೇಕಾಗುತ್ತದೆ. ನೀವು ಯಾವ ದೇಶದಲ್ಲಿ ನೆಲೆಸಿರುತ್ತೀರೋ ಅಲ್ಲಿ ನಿಮಗೆ ಆರೋಗ್ಯ ವಿಮಾ ಪಾಲಿಸಿ ಇರಬಹುದು. ಅದಕ್ಕೆ ಭೌಗೋಳಿಕವಾದ ಮಿತಿಗಳಿರುತ್ತವೆ ಮತ್ತು ಅದು ಭಾರತದಲ್ಲಿ ನೀಡುವ ಚಿಕಿತ್ಸೆಗೆ ಅನ್ವಯವಾಗದೇ ಇರಬಹುದು.ಇದರ ಜೊತೆಗೆ ಭಾರತದಲ್ಲಿ ಆರೋಗ್ಯ ಸೇವಾ ಸೌಲಭ್ಯಗಳ ವೆಚ್ಚ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಹಾಗಾಗಿ ಸಮಗ್ರ ವೈದ್ಯಕೀಯ ಸೌಲಭ್ಯ ಅತ್ಯಗತ್ಯವಾಗಿದೆ. ಈ ಹಿನ್ನೆಲೆಯಲ್ಲಿ ಎನ್‌ಆರ್‌ಐ ಆರೋಗ್ಯ ವಿಮೆಯು ಹಣಕಾಸು ಸುರಕ್ಷಾ ಕವಚವಾಗಿ ಕೆಲಸಮಾಡುತ್ತದೆ. ಇದ-ರಿಂದ ಭಾರತದಲ್ಲಿ ನೀವು ಉಳಿದುಕೊಂಡಾಗ ಉಂಟಾಗಬಹುದಾದ ವೈದ್ಯಕೀಯ ವೆಚ್ಚಗಳು ನಿಮ್ಮ ಪಾಕೆಟ್‌ಗೆ ಹೊರೆಯಾಗದಂತೆ ತಡೆಯುತ್ತದೆ.

**ಎನ್‌ಆರ್‌ಐಗಳಿಗೆ ಆರೋಗ್ಯ ವಿಮೆಯ ಪ್ರಯೋಜನಗಳು:** ಎನ್‌ಆರ್‌ಐ ಆರೋಗ್ಯ ವಿಮಾ ಯೋಜನೆ ಅನೇಕ ಪ್ರಯೋಜನಗಳನ್ನು ಹೊಂದಿದೆ. ಇದರಿಂದ ಮಾನಸಿಕ ನೆಮ್ಮದಿಯೂ ಸಿಗುತ್ತದೆ ಮತ್ತು ಯೋಗಕ್ಷೇಮವೂ ಲಭ್ಯ. ಅಂತಹ ಪ್ರಮುಖ ಪ್ರಯೋಜನಗಳು ಯಾವುವು ಎಂಬುದನ್ನು ನೋಡೋಣ:

**ಸಮಗ್ರ ಸೌಲಭ್ಯ:** ಆಸ್ಪತ್ರೆ ಚಿಕಿತ್ಸಾ ವೆಚ್ಚಗಳು, ವೈದ್ಯರೊಂದಿಗೆ ಸಮಾಲೋಚನೆ, ರೋಗ ಪತ್ತೆ ಪರೀಕ್ಷೆಗಳು ಮತ್ತು ತೀವ್ರ ಅಸ್ವಸ್ಥತೆಯ ಸೌಲಭ್ಯವನ್ನು ಕೂಡ ಒಳಗೊಳ್ಳುವಂತೆ ಮಾಡಬಹುದು, ನೀವು ಯಾವ ಪ್ಲ್ಯಾನ್ ಆಯ್ಕೆ ಮಾಡಿಕೊಂಡಿದ್ದೀರಿ ಎಂಬುದನ್ನು ಇದು ಅವಲಂಬಿಸಿರುತ್ತದೆ.

**ತೆರಿಗೆ ಪ್ರಯೋಜನ:** ಆದಾಯ ತೆರಿಗೆಯ 80ಡಿ ಸೆಕ್ಷನ್ ಅಡಿಯಲ್ಲಿ (ಅರ್ಹತಾ ಮಾನದಂಡಕ್ಕೆ ಅನುಗುಣವಾಗಿ) ನಿಮ್ಮ ಎನ್‌ಆರ್‌ಐ ಆರೋಗ್ಯ ವಿಮೆಗೆ ಪಾವತಿ ಮಾಡಿದ ಪ್ರೀಮಿಯಂ ಮೊತ್ತವನ್ನು ಕ್ಲೈಮ್ ಮಾಡಿಕೊಳ್ಳಬಹುದು.

**ಕೌಟುಂಬಿಕ ಭದ್ರತೆ:** ನಿಮ್ಮ ಪ್ರೀತಿಪಾತ್ರರಿಗೂ ಸುರಕ್ಷತಾ ಜಾಲವನ್ನು ವಿಸ್ತರಿಸಬಹುದು. ಅನೇಕ ವಿಮಾ ಯೋಜನೆಗಳು ನಿಮ್ಮ ಸಂಗಾತಿ, ಮಕ್ಕಳು ಮತ್ತು ಭಾರತದಲ್ಲಿ ವಾಸಿಸುತ್ತಿರುವ ವಯಸ್ಸಾದ ಪಾಲಕರನ್ನು ಕೂಡ ಒಳಗೊಂಡಿರುತ್ತವೆ.

**ಪ್ರಮುಖ ಅಂಶಗಳು:** ಎನ್‌ಆರ್‌ಐ ವಿಮಾ ಪಾಲಿಸಿ ಮಹತ್ವದ ಅನುಕೂಲಗಳನ್ನು ಒದಗಿಸುತ್ತಾದರೂ ಈ ಸಂದರ್ಭದಲ್ಲಿ ಕೆಲವು ಅಂಶಗಳನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು

**ಪರಿಗಣಿಸಬೇಕಾದ ಅಂಶಗಳು:**

**ಭೌಗೋಳಿಕ ಕವರೇಜ್:** ಹೆಚ್ಚಿನ ಪಾಲಿಸಿಗಳು ಭಾರತದೊಳಗೆ ಮಾಡಲಾದ ವೈದ್ಯಕೀಯ ವೆಚ್ಚಗಳನ್ನು ಮಾತ್ರ ಕವರ್ ಮಾಡುವ ಹಾಗೆ ವಿನ್ಯಾಸಗೊಳಿಸಲಾಗಿರುತ್ತದೆ. ಅತ್ಯಂತ ಅಪರೂಪದ ಪ್ರಕರಣಗಳಲ್ಲಿ ಕೆಲವು ನಿರ್ದಿಷ್ಟ ಚಿಕಿತ್ಸೆಗಳಿಗೆ ಮಾತ್ರ ವಿದೇಶದಲ್ಲಿ ಪಡೆದುಕೊಳ್ಳಲು ಅವಕಾಶವಿರುತ್ತದೆ.

**ದಾಖಲೆಗಳು ಮತ್ತು ಪರಿಶೀಲನೆ:** ಎನ್‌ಆರ್‌ಐಗಳು ತಮ್ಮ ವಾಸಸ್ಥಳದ ಸ್ಥಾನಮಾನವನ್ನು ತಿಳಿಸುವ ಸಂಬಂಧ ಪರಿಶೀಲಿನೆಗಾಗಿ ಕೆಲವು ಹೆಚ್ಚುವರಿ ದಾಖಲೆಗಳನ್ನು ನೀಡಬೇಕಾದ ಅಗತ್ಯವಿರುತ್ತದೆ ವಿಮಾದಾರರ ಮನವಿಯ ಮೇರೆಗೆ ಈ ದಾಖಲೆಗಳನ್ನು ನೀಡುವುದರಿಂದ ಅರ್ಜಿ ಪ್ರಕ್ರಿಯೆ ಸುಗಮವಾಗುತ್ತದೆ.

**ವಾಸ್ತವ್ಯದ ಸ್ಥಾನಮಾನ:** ಭಾರತದಲ್ಲಿ ಶಾಶ್ವತವಾಗಿ ಬಂದು ನೆಲೆಸುವ ಯೋಜನೆ ಇರುವ ಎನ್‌ಆರ್‌ಐಗಳು ಕಾಯುವ ಅವಧಿಯನ್ನು ಪೂರ್ತಿಗೊಳಿಸುವ ಸಲುವಾಗಿ ಆರೋಗ್ಯ ವಿಮಾ ಪಾಲಿಸಿಯನ್ನು ಸಾಧ್ಯವಾದಷ್ಟು ಬೇಗ ಖರೀದಿ ಮಾಡುವುದು ಉತ್ತಮ. ಇದರಿಂದ ಪ್ರಯೋಜನಗಳೂ ಹೆಚ್ಚು. ಇಂತಹ ಕಾರ್ಯತಂತ್ರವನ್ನು ಅನುಸರಿಸುವುದರಿಂದ ಭಾರತದಲ್ಲಿ ಕಾಯಂ ಆಗಿ ನೆಲೆಸುವ ಹೊತ್ತಿಗೆ ಅವರ ಕಾಯುವ ಅವಧಿ ಮುಗಿದು ಹೋಗಿರುತ್ತದೆ. ಹೀಗೆ ಮಾಡುವುದರಿಂದ ಭಾರತದಲ್ಲಿ ಮರಳಿ ವಾಸ್ತವ್ಯ ಹೂಡಿದ ಬಳಿಕ ಅಥವಾ ಭಾರತಕ್ಕೆ ಭೇಟಿ ಕೊಟ್ಟ ತಕ್ಷಣ ಆರೋಗ್ಯ ವಿಮಾ ಪಾಲಿಸಿಯಲ್ಲಿ ಹೂಡಿಕೆ ಮಾಡಬೇಕಾದ ಒತ್ತಡ ಇರುವುದಿಲ್ಲ. ಇದರ ಜೊತೆಗೆ ನಿರ್ದಿಷ್ಟ ವಯಸ್ಸು ಮೀರಿದ ಬಳಿಕ ಅಥವಾ ಮೊದಲೇ ಯಾವುದಾದರೂ ರೋಗವಿದ್ದಿದ್ದರೆ ಸೌಲಭ್ಯದಲ್ಲಿ ನಿರ್ಬಂಧ ವಿಧಿಸಬಹುದು ಅಥವಾ ದುಬಾರಿಯೂ ಆಗಬಹುದು.



**ಸಾಮಾನ್ಯ ಪ್ರಶ್ನೆಗಳು:** ಒಬ್ಬ ಎನ್‌ಆರ್‌ಐ ಭಾರತದಲ್ಲಿ ಆರೋಗ್ಯ ವಿಮೆಯನ್ನು ಪಡೆದರೆ ಆತ/ಆಕೆ ತನ್ನ ದೇಶದಲ್ಲಿ (ಭಾರತದ ಆಚೆಗೆ) ತೆರಿಗೆಯನ್ನು ತಪ್ಪಿಸಬಹುದೇ?

ಇಲ್ಲ. ಒಂದು ವೇಳೆ ಎನ್‌ಆರ್‌ಐ ಭಾರತದಲ್ಲಿ ವೈದ್ಯಕೀಯ ವಿಮಾ ಪಾಲಿಸಿಯನ್ನು ಖರೀದಿ ಮಾಡಿದರೆ ಆತ/ಆಕೆ ತಾನು ನೆಲೆಸಿರುವ ರಾಷ್ಟ್ರದಲ್ಲಿ ತೆರಿಗೆಯನ್ನು ಉಳಿತಾಯ ಮಾಡಲು ಸಾಧ್ಯವಿಲ್ಲ. ನೀವು ನಿಮ್ಮ ಐಟಿಆರ್‌ನ್ನು ಭಾರತದಲ್ಲಿ ಸಲ್ಲಿಸುವುದಾದರೆ ಮಾತ್ರ ತೆರಿಗೆಯನ್ನು ಉಳಿತಾಯ ಮಾಡಬಹುದು.

**ಒಂದು ವೇಳೆ ಎನ್‌ಆರ್‌ಐ ಶಾಶ್ವತವಾಗಿ ಭಾರತಕ್ಕೆ ಹಿಂದಿರುಗಿದರೆ?:** ಒಬ್ಬ ಎನ್‌ಆರ್‌ಐ ಭಾರತಕ್ಕೆ ಶಾಶ್ವತವಾಗಿ ಹಿಂದಿರುಗಿದರೆ ಆತ ತನ್ನ ವಾಸ್ತವ್ಯದ ಸ್ಥಿತಿಗತಿಯ ಬಗ್ಗೆ ತಕ್ಷಣ ಮಾಹಿತಿ ನೀಡಬೇಕಾಗುತ್ತದೆ.ಅದರಿಂದ ನಿಮ್ಮ ಪಾಲಿಸಿಯ ಮೇಲೆ ಅನೇಕ ರೀತಿಯಲ್ಲಿ ಪರಿಣಾಮ ಬೀರುತ್ತದೆ. ಪ್ರೀಮಿಯಂ ನವೀಕರಣ ಮಾಡಿದಾಗ ಎನ್‌ಆರ್‌ಐ ವಿನಾಯ್ತಿ ಸಿಗುವುದಿಲ್ಲ. ಹಾಗಾಗಿ ಪ್ರೀಮಿಯಂ ಮೊತ್ತ ಕೂಡ ಹೆಚ್ಚುತ್ತದೆ.

ಪಾಲಿಸಿಯು ಭಾರತದ ಹೊರಗೆ ಚಿಕಿತ್ಸೆ ಪಡೆಯಲು ಅವಕಾಶ ನೀಡಿದರೆ, ಪಾಲಿಸಿಯ ನೀತಿ–ನಿಯಮಗಳಿಗೆ ತಕ್ಕಂತೆ ಸೌಲಭ್ಯದ ನಿರ್ಬಂಧವನ್ನು ತೆಗೆದುಹಾಕುವ ಪ್ರಯೋಜನವನ್ನು ಪಡೆದುಕೊಳ್ಳಬಹುದು.

**ಬಾಟಮ್ ಲೈನ್:** ಭಾರತಕ್ಕೆ ಭೇಟಿ ನೀಡುವ ಅಥವಾ ಇಲ್ಲಿ ವಾಸ್ತವ್ಯ ಹೂಡುವ ಎನ್‌ಆರ್‌ಐಗಳಿಗೆ ಆರೋಗ್ಯ ವಿಮಾ ಪಾಲಿಸಿಯು ಅತ್ಯಂತ ನಿರ್ಣಾಯಕ ಹಣಕಾಸು ಸುರಕ್ಷಾ ಕವಚ. ಇವುಗಳಲ್ಲಿ ಇರುವ ಪ್ರಯೋಜನಗಳು ಮತ್ತು ವಿಶೇಷತೆಗಳನ್ನು ಅರ್ಥ ಮಾಡಿಕೊಳ್ಳುವ ಮೂಲಕ ಎನ್‌ಆರ್‌ಐಗಳು ಮಾಹಿತಿಪೂರ್ಣವಾದ ನಿರ್ಧಾರಗಳನ್ನು ತೆಗೆದುಕೊಂಡು ತಮ್ಮನ್ನು ಹಾಗೂ ತಮ್ಮ ಕುಟುಂಬಗಳನ್ನು ಅನಿರೀಕ್ಷಿತ ವೈದ್ಯಕೀತ ವೆಚ್ಚಗಳಿಂದ ರಕ್ಷಿಸಬಹುದಾಗಿದೆ.


INSPIRE INDIA
WEALTH PVT LTD

ಹೂಡಿಕೆ ವೇಳೆ -ನೆನಪಿರಲಿ ಇನ್‌ಸ್ಪೈರ್ ಇಂಡಿಯಾ ಎಎಂಎಫ್‌ಐ ನೋಂದಾಯಿತ ಮ್ಯೂಚುಯಲ್ ಫಂಡ್ ವಿತರಕರು




ಈ ವಾರ್ತಾಪತ್ರದ ಸಂಕಲನ ಮಾಡುವ ಸಂದರ್ಭದಲ್ಲಿ ನಾವು ಎಲ್ಲ ರೀತಿಯ ಕಾಳಜಿ ಮತ್ತು ಎಚ್ಚರಿಕೆಯನ್ನು ವಹಿಸಿರುತ್ತೇವೆ. ಇಲ್ಲಿನ ಮಾಹಿತಿಗಳನ್ನು ಹಲವು ನಂಬಿಕೆಗೆ ಅರ್ಹವಾದ ಮೂಲಗಳಿಂದ ಪಡೆದಿರುತ್ತೇವೆ. ಆದರೆ, ಯಾವುದೇ ಮಾಹಿತಿಯ ಖಚಿತತೆ, ಅರ್ಹತೆ ಅಥವಾ ಪರಿಪೂರ್ಣತೆಯ ಬಗ್ಗೆ ಖಾತರಿಯನ್ನು ನೀಡುವುದಿಲ್ಲ. ಹಾಗಾಗಿ ಇಂತಹ ಮಾಹಿತಿ ಬಳಕೆಯಿಂದ ಆಗಬಹುದಾದ ಯಾವುದೇ ದೋಷ ಅಥವಾ ಲೋಪಗಳಿಗೆ ಜವಾಬ್ದಾರರಾಗಿರುವುದಿಲ್ಲ. ಈ ವಾರ್ತಾಪತ್ರದಲ್ಲಿ ತಿಳಿಸಲಾದ, ಚರ್ಚಿಸಲಾದ ಅಥವಾ ಶಿಫಾರಸ್ಸು ಮಾಡಲಾದ ಯಾವುದೇ ಯೋಜನೆಗಳಿಗೆ ಸಂಬಂಧಿಸಿದಂತೆ ಹೂಡಿಕೆ ಮಾಡುವ ಸಮರ್ಪಕತೆ ಬಗ್ಗೆ ಹೂಡಿಕೆದಾರರು ಸೂಕ್ತವಾದ ಹಣಕಾಸು ಸಲಹೆಗಳನ್ನು ಪಡೆಯಬೇಕು ಮತ್ತು ಭವಿಷ್ಯದ ನಿರೀಕ್ಷೆಗಳ ಬಗ್ಗೆ ನೀಡಿರುವ ಹೇಳಿಕೆಗಳು ಕಾರ್ಯರೂಪಕ್ಕೆ ಬರಬಹುದು ಅಥವಾ ಬಾರದೇ ಇರಬಹುದು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಮ್ಯೂಚುಯಲ್ ಫಂಡ್ ಹೂಡಿಕೆಗಳು ಯಾವತ್ತೂ ಮಾರುಕಟ್ಟೆಗೆ ಸಂಬಂಧಿಸಿದ ಅಪಾಯದ ವ್ಯಾಪ್ತಿಗೆ ಒಳಪಟ್ಟಿರುತ್ತವೆ. ಹಾಗಾಗಿ ಹೂಡಿಕೆ ಮಾಡುವುದಕ್ಕೂ ಮುನ್ನ ನಿಮಗೆ ನೀಡಲಾದ ದಾಖಲೆಗಳನ್ನು ದಯವಿಟ್ಟು ಅತ್ಯಂತ ಎಚ್ಚರಿಕೆಯಿಂದ ಓದಿಕೊಳ್ಳಿ. ಹಿಂದಿನ ನಿರ್ವಹಣೆಯ ಕೇವಲ ಸೂಚಕ ಉದ್ದೇಶವನ್ನು ಹೊಂದಿದ್ದು ಅದು ಯಾವುದೇ ಕಾರಣಕ್ಕೂ ಭವಿಷ್ಯದ ಮಾರ್ಗದರ್ಶಕವಲ್ಲ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು.



ಇನಸ್ಪೈರ್ ಇಂಡಿಯಾ ವೆಲ್ತ್ ಪ್ರೈ.ಲಿ.
#65, ಸುರಾಸ ಎನ್‌ಕ್ಲೇವ್, ಮೊದಲ ಮಹಡಿ
ಪುಟ್ಟಣ್ಣ ರಸ್ತೆ, ಗಾಂಧಿ ಬಜಾರ್,
ಬಸವನಗುಡಿ, ಬೆಂಗಳೂರು -560004
9035414414, 080-42129917
info@inspireindiafs.com


"ದೇಹವನ್ನು ಹಣಕ್ಕಿಂತ ಹೆಚ್ಚಾಗಿ ರಕ್ಷಿಸಬೇಕು. ಯಾಕೆಂದರೆ ದೇಹವು ಹದಗೆಟ್ಟ ನಂತರ ಹಣವು ಅದನ್ನು ರಕ್ಷಿಸದು"